

ತುಮಕೂರು ಜಿಲ್ಲೆ ಪಾವಗಡದಲ್ಲಿರುವ ವಿಶ್ವದಲ್ಲೇ ಅತಿದೊಡ್ಡ ಸೌರಶಕ್ತಿ ಪಾರ್ಕ್

ಮೂರ್ನಾಲ್ಕು ವರ್ಷಗಳ ಹಿಂದೆ ಬೇಸಿಗೆ ಬಂತೆಂದರೆ 'ಕತ್ತಲಲ್ಲಿ ಕರ್ನಾಟಕ', ಕತ್ತಲೆಯೆಡೆಗೆ ಕರ್ನಾಟಕ' ಎಂಬ ಶೀರ್ಷಿಕೆಯಡಿ ಮಾಧ್ಯಮಗಳಲ್ಲಿ ವರದಿ ಪ್ರಕಟವಾಗುತ್ತಿದ್ದುದು ಸಾಮಾನ್ಯವಾಗಿತ್ತು. ಪವರ್ ಕಟ್, ಅನಿಯಮಿತ ಲೋಡ್ ಶೆಡ್ಡಿಂಗ್ ಪದಗಳಂತೂ ಹೆಚ್ಚು ಚಾಲ್ತಿಯಲ್ಲಿದ್ದವು.

ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆ ಬರೆಯಲು ಹಗಲು ರಾತ್ರಿ ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಓದುತ್ತಿದ್ದ ವಿದ್ಯಾರ್ಥಿಗಳು,ಅವರ ಪೋಷಕರು ಪರೀಕ್ಷಾ ಸಮಯ ಬರುತ್ತಿದ್ದಂತೆ ಸರ್ಕಾರಕ್ಕೆ, ಇಂಧನ ಸಚಿವರಿಗೆ, ಕೊನೆಗೆ ಲೈನ್‌ಮನ್‌ಗಳಿಗೆ ಹಿಡಿಶಾಪ ಹಾಕುವುದು, ಸರ್ಕಾರದ ವಿರುದ್ಧ ಕೆಂಡಕಾರುವುದು ನಿತ್ಯದ ವಿದ್ಯಮಾನವಾಗಿತ್ತು.

ಇತ್ತೀಚಿನ ದಿನಮಾನಗಳಲ್ಲಿ ಪರೀಕ್ಷಾ ಸಮಯದಲ್ಲಿ ಮಕ್ಕಳಿಗೆ ಇಂಧನ ಇಲಾಖೆಯೊಂದಿದೆ ಎಂಬುದೂ ನೆನಪಾಗುವುದಿಲ್ಲ.  ವಿದ್ಯುತ್ ಕಡಿತವಾಗಿ, ಓದಲು ಚಿಮಣಿ ಬುಡ್ಡಿ ಅಥವಾ ಮೇಣದ ಬತ್ತಿ ಅನಿವಾರ್ಯವಾದರೆ ಮಕ್ಕಳಿಗೆ, ಅವರ ಹೆತ್ತವರಿಗೆ ಸಿಟ್ಟು ಸೆಡವು ಬರುತ್ತದೆ. ಕತ್ತಲು ಆವರಿಸುತ್ತಿದ್ದಂತೆ ವಿದ್ಯುದ್ದೀಪ ತಟಕ್ ಅಂತ ಬೆಳಕು ಹೊರಚಿಮ್ಮಿ, ಓದಲು ಹಿತಕರ ವಾತಾವರಣ ಇದ್ದರೆ ಯಾವ ಮಕ್ಕಳು ಯಾರಿಗೂ ಹಿಡಿಶಾಪ ಹಾಕುವುದಿಲ್ಲ.

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಜನಪರ ಕಾಳಜಿ, ಇಂಧನ ಸಚಿವ ಡಿ.ಕೆ. ಶಿವಕುಮಾರ್ ಅವರ ಇಚ್ಛಾಶಕ್ತಿ ಹಾಗೂ ಕ್ರಿಯಾಶಕ್ತಿಯ ಫಲವಾಗಿ ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ವಿದ್ಯುತ್ ಕ್ರಾಂತಿಯೇ ನಡೆದಿದೆ. ಇದರ ಫಲವಾಗಿ, ಪವರ್ ಕಟ್, ಲೋಡ್ ಶೆಡ್ಡಿಂಗ್ ಎಂಬ ಶಬ್ದಗಳು ಜನರ ಬಾಯಿಂದ ಮರೆಯಾಗಿವೆ. ವಿದ್ಯುತ್ ಉತ್ಪಾದನೆ ಹೆಚ್ಚಿಸಲು ನೀಡಿದ ಆದ್ಯತೆ, ವಿದ್ಯುತ್ ಪ್ರಸರಣಕ್ಕೆ ಪೂರಕವಾಗಿ ಹೊಸ ವಿದ್ಯುತ್ ಪ್ರಸರಣ ಕೇಂದ್ರಗಳ ಸ್ಥಾಪನೆ, ವಿದ್ಯುತ್ ತಂತಿ ಎಳೆಯುವುದು, ವಿದ್ಯುತ್ ಸೋರಿಕೆ ತಡೆಗಟ್ಟಲು ವಿಶೇಷ ಕ್ರಮ, ಸಮರ್ಪಕ ವಿದ್ಯುತ್ ಪೂರೈಕೆಗೆ ಒತ್ತು, ಎಲ್ಲಿಯೇ ದೂರು ಕೇಳಿಬಂದರೂ ತಕ್ಷಣ ಅದಕ್ಕೆ ಪರಿಹಾರ ನೀಡುವ ಸುಸಜ್ಜಿತ ಸಿಬ್ಬಂದಿ ತಯಾರು ಮಾಡಲು ಇಂಧನ ಇಲಾಖೆ ಸಾಕಷ್ಟು ಶ್ರಮ ಹಾಕಿದೆ. ಸಚಿವ ಶಿವಕುಮಾರ್ ಅವರ ದೂರದೃಷ್ಟಿ, ಇಲಾಖೆಯನ್ನು ಸರಿದಾರಿಗೆ ತರಬೇಕು ಎಂಬ ಸಂಕಲ್ಪ ಬಲದಿಂದಾಗಿ ವಿದ್ಯುತ್ ಉತ್ಪಾದನೆ ಮತ್ತು ಪೂರೈಕೆಯಲ್ಲಿ ಮಹತ್ವದ ಸುಧಾರಣೆ ನಡೆದು ಹೋಗಿದೆ. ಇದರ ಫಲವೆಂಬಂತೆ ಎಲ್ಲಿಯೂ ವಿದ್ಯುತ್ ಕಡಿತದ ಸಮಸ್ಯೆ ಎದುರಾಗುತ್ತಿಲ್ಲ ಎಂಬುದು ವಾಸ್ತವ.

ಸುಧಾರಣೆಯತ್ತ ಸರ್ಕಾರ ಆದ್ಯತೆ ಮೇರೆಗೆ ಚಿತ್ತ ಹರಿಸಿದ್ದರಿಂದಾಗಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗುವುದು ಕಡಿಮೆಯಾಯಿತು. ನಗರ ಪ್ರದೇಶಗಳಲ್ಲಿ 22 ರಿಂದ 24 ಗಂಟೆಗಳ ಹಾಗೂ ಗ್ರಾಮೀಣ ಪ್ರದೇಶದಲ್ಲಿ  7ಗಂಟೆ ಅವಧಿಯಲ್ಲಿ  ತ್ರೀಫೇಸ್ ವಿದ್ಯುತ್ ಹಾಗೂ 10ಗಂಟೆ ಅವಧಿಯಲ್ಲಿ ಸಿಂಗಲ್ ಫೇಸ್ ವಿದ್ಯುತ್ ನೀಡಲು ಸಾಧ್ಯವಾಯಿತು.

ಇದಕ್ಕೆ ಮೊದಲು, ಗ್ರಾಮೀಣ ಭಾಗದಲ್ಲಿ ಯಾವಾಗ ತ್ರೀಫೇಸ್ ವಿದ್ಯುತ್ ಸಿಗುತ್ತದೆ ಎಂಬುದು ಖಾತ್ರಿ  ಇರಲಿಲ್ಲ. ಹಾಗಾಗಿ ರೈತರ ಪಂಪ್‌ಸೆಟ್‌ಗಳಿಗೆ ದೊಡ್ಡ ಸಮಸ್ಯೆಯಾಗಿತ್ತು. ಮಧ್ಯರಾತ್ರಿ ಬಳಿಕ ತ್ರೀಫೇಸ್ ವಿದ್ಯುತ್ ಪೂರೈಸುವ ಪರಿಪಾಠದಿಂದಾಗಿ ರೈತರು ತೀವ್ರ ಸಂಕಷ್ಟಕ್ಕೆ ಈಡಾಗಿದ್ದರು. ಇದನ್ನು ತಪ್ಪಿಸಲು ತ್ರೀಫೇಸ್ ವಿದ್ಯುತ್ ಯಾವಾಗ ಪೂರೈಸಲಾಗುತ್ತದೆ ಎಂದು ಆಯಾ ವಿಭಾಗ ವಲಯದಲ್ಲಿ ಸಮಯ ನಿಗದಿಪಡಿಸಿ, ರೈತರಿಗೂ ಮಾಹಿತಿ ನೀಡುವ ಪದ್ಧತಿಯನ್ನು ಚಾಲ್ತಿಗೆ ತರಲಾಯಿತು. ಇದರಿಂದ ರೈತರಿಗೆ ಸಕಾಲದಲ್ಲಿ, ನಿಗದಿತ ಪ್ರಮಾಣದ ವಿದ್ಯುತ್ ಪೂರೈಕೆಯಾಗುವ ವ್ಯವಸ್ಥೆ ಜಾರಿಯಾಯಿತು.

2013ರಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗ, ಎಲ್ಲ ಮೂಲಗಳಿಂದ ರಾಜ್ಯದ ಒಟ್ಟು ವಿದ್ಯುತ್  ಉತ್ಪಾದನಾ ಸಾಮರ್ಥ್ಯ 13,000 ಮೆಗಾವಾಟ್ ಇತ್ತು, 2017ರ ಮಾರ್ಚ್ ಅಂತ್ಯಕ್ಕೆ ಈ ಪ್ರಮಾಣ 21,950 ಮೆಗಾವಾಟ್‌ಗೆ ಏರಿಕೆಯಾಗಿದೆ.

2013ರಲ್ಲಿ ಪೂರೈಕೆ ಸಾಮರ್ಥ್ಯ 6,500 ಮೆಗಾವಾಟ್ ನಷ್ಟಿತ್ತು. 2017ರಲ್ಲಿ ಪೂರೈಕೆ ಸಾಮರ್ಥ್ಯ 10,242 ಮೆಗಾವಾಟ್‌ಗೆ ಏರಿಕೆಯಾಗಿದೆ.

ನವೀಕರಿಸಬಹುದಾದ ಇಂಧನ ಮೂಲಗಳಾದ ಪವನ, ಕಿರುಜಲ, ಸೌರಶಕ್ತಿ, ಸಹ ವಿದ್ಯುತ್, ಜೈವಿಕ ಇಂಧನ ಮೂಲಗಳಿಂದ 2013ರಲ್ಲಿ 525

**ಮುಖ್ಯಮಂತ್ರಿ ಸಿದ್ದರಾಮಯ್ಯನವರ ಜನಪರ ಕಾಳಜಿ, ಇಂಧನ ಸಚಿವ ಡಿ.ಕೆ. ಶಿವಕುಮಾರ್ ಅವರ ಇಚ್ಛಾಶಕ್ತಿ ಹಾಗೂ ಕ್ರಿಯಾಶಕ್ತಿಯ ಫಲವಾಗಿ ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ವಿದ್ಯುತ್ ಕ್ರಾಂತಿಯೇ ನಡೆದಿದೆ. ಇದರ ಫಲವಾಗಿ, ಪವರ್ ಕಟ್, ಲೋಡ್ ಶೆಡ್ಡಿಂಗ್ ಎಂಬ ಶಬ್ದಗಳು ಜನರ ಬಾಯಿಂದ ಮರೆಯಾಗಿವೆ.**